

## ಸುಡುಗಾಡು ಸಿದ್ಧರಿಗೆ ಸಿಗಲಿ ಮನ್ನಣೆ

ಐತಿಹಾಸಿಕ ನಗರ, ಪ್ರವಾಸಿತಾಣವಾಗಿರುವ ಬಾದಾಮಿಗೆ ಸುಡುಗಾಡು ಸಿದ್ಧರೊಬ್ಬರು ಇತ್ತೀಚೆಗೆ ಬಂದಿದ್ದರು. ತಮ್ಮ ಕೈಚಳಕದ ಪ್ರದರ್ಶನ ಮೂಲಕ ಜನರನ್ನು ಅಚ್ಚರಿಗೊಳಿಸಿದರು. ಅವರ ಆಕರ್ಷಕ ಉಡುಗೆ, ತೊಡುಗೆ, ತಲೆಗೆ ಪೇಟಾ, ನವಿಲುಗರಿ ಪುಕ್ಕ, ಮುಖಕ್ಕೆ ವಿಭೂತಿ, ಕುಂಕುಮವನ್ನು ಆಕರ್ಷಕವಾಗಿ ಹಚ್ಚಿಕೊಂಡು, ಕೊರಳಲ್ಲಿ ರುದ್ರಾಕ್ಷಿ ಮಾಲೆ ಧರಿಸಿ ಕಂಗೊಳಿಸುತ್ತಿದ್ದರು. ಜೊತೆಗೆ ಶಂಖ ಊದುತ್ತ, ಜಾಗಟೆ ಬಡಿಯುತ್ತ, ಬಾಗಿಲು ಮುಂದಿನ ಹುಸಿಯಲ್ಲಿ ಹೆಗಲ ಮೇಲೆ ಹೊತ್ತ ಚೀಲ ಕೆಳಗಿಳಿಸಿ ಕುಳಿತು ಆಟಕ್ಕೆ ಪೀಠಿಕೆ ಹಾಕುತ್ತಿದ್ದರು. ಚೀಲವನ್ನು ಬಡಿದಾಗ ಚಿಂವ್ ಚಿಂವ್ ಶಬ್ದ ಬರುತ್ತಿತ್ತು. ಲಯಬದ್ಧವಾಗಿ 'ಮಲ್ಲಾಡ ಚವಡಿ ಎಲ್ಲಿಗೆ ಬಂದಿ'? ಎಂದು ರಾಗ ತೆಗೆದು ಹೇಳುತ್ತಿದ್ದರು.

ಹತ್ತಾರು ನಿಂಬೆಹಣ್ಣು, ಕಲ್ಲು ಗುಂಡುಗಳನ್ನು ಒಂದೊಂದಾಗಿ ನುಂಗಿ, ಕತ್ತಿನ ಹಿಂದೆ ಗುದ್ದಿಕೊಳ್ಳುತ್ತಾ ಒಂದೊಂದಾಗಿ ಹೊರಗೆ ತಂದು ಮಕ್ಕಳಿಗೆ ಅಚ್ಚರಿ ಮೂಡಿಸುತ್ತಿದ್ದರು. ಕೈಯಲ್ಲಿ 'ಛೂ ಮಂತ್ರಕಾಳಿ' ಎಂದು ಚೋಳು ತರಿಸಿ ತೋರಿಸುತ್ತಿದ್ದರು. ಅಂಗೈಯಲ್ಲಿ ಲಿಂಗು, ದೇವರ ಮೂರ್ತಿ ತೋರಿಸುತ್ತಿದ್ದರು. ಇಂದಿನ ವಿಜ್ಞಾನ ಯುಗದಲ್ಲಿ, ಕಂಪ್ಯೂಟರ್, ಮೊಬೈಲ್ ಬಂದ ಮೇಲೆ ಪ್ರಾಚೀನ ಕಲೆಗಳು, ಆಟಗಳೆಲ್ಲ ಮೂಲೆಗುಂಪಾಗುತ್ತಿವೆ. ಅಲೆಮಾರಿ ಸುಡುಗಾಡು ಸಿದ್ಧರು ಕಣ್ಮರೆಯಾಗುತ್ತಿದ್ದಾರೆ. ಆಧುನಿಕ ಜಾದೂ ಪ್ರದರ್ಶನಗಳ ಮಾದರಿಯಲ್ಲಿ ಅವರ ಕಲೆ ಜನಮನ್ನಣೆ ಗಳಿಸಬೇಕಿದೆ. ಈ ಕಲೆಯ ಪುನರುಜ್ಜೀವನ ಕಾರ್ಯ ಆಗಬೇಕಿದೆ.

–ಡಾ. ಕರವೀರಪ್ರಭು ಕ್ಯಾಲಕೊಂಡ, ಬಾದಾಮಿ



## ಅಮೆರಿಕದಲ್ಲಿ ತಿರುವಳ್ಳುವರ್

ಅಮೆರಿಕದಲ್ಲಿನ ಶಿಕಾಗೋದ ಹ್ಯಾಂಬರ್ಗ್‌ನಲ್ಲಿರುವ, 'ಶಿಕಾಗೋ ಎಥೆನಿಯಂ ಅಂತರರಾಷ್ಟ್ರೀಯ ಶಿಲ್ಪಕಲಾ ಉದ್ಯಾನ'ದಲ್ಲಿ ತಮಿಳು ತತ್ವಜ್ಞಾನಿ ತಿರುವಳ್ಳುವರ್‌ರವರ ಪ್ರತಿಮೆ ಕಂಗೊಳಿಸುತ್ತಿದೆ. ಸುಮಾರು ಇಪ್ಪತ್ತು ಎಕರೆಗಳಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಉದ್ಯಾನದಲ್ಲಿ ಸ್ಟೀಲ್, ಮರ, ಕಲ್ಲು, ಕಬ್ಬಿಣ ಇತ್ಯಾದಿಗಳಿಂದ ಮಾಡಿದ ಅನೇಕ ಕಲಾಕೃತಿಗಳ ಪೈಕಿ ತಿರುವಳ್ಳುವರ್ ಪ್ರತಿಮೆಯೊಂದೇ ಅಲ್ಲಿರುವುದು ವಿಶೇಷ. 2019ರಲ್ಲಿ ಅಮೆರಿಕದಲ್ಲಿ ನಡೆದ 10ನೇ ವಿಶ್ವ ತಮಿಳು ಸಮ್ಮೇಳನದ ನೆನಪಿಗಾಗಿ ವಿ.ಜಿ.ಪಿ ವಿಶ್ವ ತಮಿಳು ಸಂಘ ಪ್ರತಿಮೆ ಸ್ಥಾಪಿಸಿದೆ.

–ಬಿ. ಸತ್ಯನಾರಾಯಣ ಅರಸ, ಅರೆಬೈಲು

